<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ..... ಚಿತ್ತಾಪೂರ</u>

C.C: 2004/2023
CW- 4 PW-4

ಹೆಸರು : ಓಬಳೇಶ

ತಂದೆಯ ಹೆಸರು : ಯಮುನಪ್ಪ

ವಯಸ್ಸು : 37 ವರ್ಷ

ಉದ್ಯೋಗ : ಮುಖ್ಯಪೇದೆ ಕಾಳಗಿ ಪೊಲೀಸ ಠಾಣೆ.

ವಾಸ ಸ್ಥಳ : ಕಾಳಗಿ.

---

<u>ಪ್ರಮಾಣವಚನ ಬೋಧಿಸಲಾಯಿತು. ದಿಃ 23.06.2026</u>

<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದ</u>

ನಾನು 2021 ರಿಂದ ಇಲ್ಲಿಯವರೆಗೆ ಕಾಳಗಿ ಪೊಲೀಸ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿಸುತ್ತಿದ್ದೇನೆ.

ದಿನಾಂಕ: 05-05-2023ರಂದು ನಾನು ಠಾಣೆಯಲ್ಲಿದ್ದಾಗ, ಚಾಸಅ-1ರವರು ಮಂಗಲಗಿ ಗ್ರಾಮದ ಭವಾನಿ ಗುಡಿಯ ಮುಂದೆ ಸಾರ್ವಜನಿಕ ರಸ್ತೆಯ ಮೇಲೆ ಒಬ್ಬ ವ್ಯಕ್ತಿ ಪರವಾನಿಗೆ ಇಲ್ಲದೆ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಬಾತ್ಮಿ ಬಂದಿದೆ ಎಂದು ತಿಳಿಸಿದರು. ನಂತರ ಚಾಸಾ-5 ರವರು ಪಂಚರಾದ ಚಾಸಾ-2 ಮತ್ತು ಚಾಸಾ-3ರವರನ್ನು ಠಾಣೆಗೆ ಕರೆದುಕೊಂಡು ಬಂದು ಚಾಸಾ-1ರವರು ಅವರನ್ನು ಪಂಚರಾಗಿ ಬರಮಾಡಿಕೊಂಡಿರುತ್ತಾರೆ. ನಂತರ ನಾನು, ಚಾಸಾ-1 ರಿಂದ ಚಾಸಾ-3 ಮತ್ತು ಚಾಸಾ-5ರವರು ನಮ್ಮ ಇಲಾಖಾ ವಾಹನದಲ್ಲಿ ಬಾತ್ಮಿ ಬಂದ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಮಧ್ಯಾಹ್ನ 3-00 ಗಂಟೆಗೆ ಮಂಗಲಗಿ ಗ್ರಾಮದ ಸಮೀಪ ಇರುವ ಬ್ರಿಡ್ಜನ ಹತ್ತಿರ ಇಲಾಖಾ ವಾಹನವನ್ನು ನಿಲ್ಲಿಸಿ, ಅಲ್ಲಿಂದ ನಡೆದುಕೊಂಡು ಭವಾನಿ ಗುಡಿ ಹತ್ತಿರ ಮಧ್ಯಾಹ್ನ 3-15 ಗಂಟೆಗೆ ತಲುಪಿ ಮರೆಯಾಗಿ ನಿಂತು ನೋಡಿದಾಗ, ಆರೋಪಿತನು ಸದರಿ ಗುಡಿಯ ಮುಂದೆ ಇರುವ ಸಾರ್ವಜನಿಕ ರಸ್ತೆಯ ಮೇಲೆ ಆಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾನೆ ಎಂದು

ಕಂಡು ಬಂತು. ನಾವು ಮಧ್ಯಾಹ್ನ 3-30 ಗಂಟೆಗೆ ದಾಳಿ ಮಾಡಿ ಮದ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದಿದ್ದು, ಅತನಿಗೆ ಚಾಸಾ-1ರವರು ಹೆಸರು, ವಿಳಾಶ ಕೇಳಿದಾಗ, ಆತನ ತನ್ನ ಹೆಸರನ್ನು ಕಾಶೀನಾಥ ತಂದೆ ಯಂಕಪ್ಪ ಶೆರಗಾರ, ಸಾ: ಮಂಗಲಗಿ, ಎಂದು ತಿಳಿಸಿದನು. ನಂತರ ಆತನ ಬಳಿ ಇದ್ದ ರಟ್ಟಿನ ಬಾಕ್ಸನ್ನು ತೆರೆದು ನೋಡಿದಾಗ, ಅದರಲ್ಲಿ 90 ಎಂ.ಎಲ್. ನ ಓರಿಜಿನಲ್ ಚಾಯ್ಸ್ ವಿಸ್ಕಿಯ 68 ಪೌಚಗಳು ಇದ್ದವು. ಸದರಿ ಮುದ್ದೆಮಾಲುಗಳನ್ನು ಚಾಸಅ-2 ಮತ್ತು 3ರವರ ಸಮಕ್ಷಮ ಪಂಚನಾಮೆಯ ಅಡಿಯಲ್ಲಿ ಅವುಗಳನ್ನು ಮಧ್ಯಾಹ್ನ 3-30 ರಿಂದ 4-30ರ ಸಮಯದಲ್ಲಿ ಜಪ್ತುಪಡಿಸಿಕೊಳ್ಳಲಾಯಿತು. ಸದರಿ ಜಪ್ತುಪಡಿಸಿಕೊಂಡ ಮುದ್ದೆಮಾಲುಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ ಸೀಲ್ ಮಾಡಲಾಯಿತು. ನಂತರ ಚಾಸಾ-1ರವರು ಜಪ್ತುಪಡಿಸಿಕೊಂಡ ಮುದ್ದೆಮಾಲುಗಳು ಮತ್ತು ಆರೋಪಿಯನ್ನು ಠಾಣೆಗೆ ಕರೆದುಕಂಡು ಬಂದಿದ್ದು, ಚಾಸಅ-7ರವರಿಗೆ ದೂರನ್ನು ನೀಡಿರುತ್ತಾರೆ. ನಾನು ಸದರಿ ದಾಳಿಯ ಕುರಿತು ಚಾಸಾ-7ರವರಿಗೆ ನನ್ನ ಹೇಳಿಕೆಯನ್ನು ನೀಡಿರುತ್ತೇನೆ.

ಆ ದಿನ ಜಪ್ತುಪಡಿಸಕೊಂಡ ಮುದ್ದೆಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಈಗ ನ್ಯಾಯಅಲಯದ ಮುಂದಿರುವ ಮು.ಮಾ.1 ಮತ್ತು 2ನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ವಶಕ್ಕೆ ಪಡೆದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತನೇ ಆ ದಿನ ವಶಕ್ಕೆ ಪಡೆದ ಆರೋಪಿಯಾಗಿರುತ್ತಾನೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎಸ್.ಎನ್.ಪಿ ವಕೀಲರಿಂದ :</u>

ಚಾಸಾ-1ರವರಿಗೆ ಬಾತ್ಮಿ ಎಷ್ಟು ಗಂಟೆಗೆ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನನಗೆ ಬಾತ್ಮಿ ವಿಷಯನವನ್ನು ಮಧ್ಯಾಹ್ನ 2-15 ಗಂಟೆಗೆ ತಿಳಿಸಿರುತ್ತಾರೆ. ಆ ದಿನ ಘಟನಾ ಸ್ಥಳಕ್ಕೆ ನಾನು, ಚಾಸಾ-1 ರಿಂದ 3 ಮತ್ತು ಚಾಸಾ-5ರವರು ನಮ್ಮ ಇಲಾಖಾ ವಾಹನದಲ್ಲಿ ಹೋಗಿರುತ್ತೆವೆ. ನಾವು ಆ ದಿನ 2-30 ಗಂಟೆಗೆ ಠಾಣೆಯಿಂದ ಹೊರಟು ಮಧ್ಯಾಹ್ನ 3-00 ಗಂಟೆಗೆ ಮಂಗಲಗಿ ಗ್ರಾಮಕ್ಕೆ ತಲುಪಿರುತ್ತೇನೆ. ನಾವು ಆ ದಿನ ನಮ್ಮ ಇಲಾಖಾ ವಾಹನವನ್ನು

ಸುಮಾರು 500 ಮೀ. ದೂರದಲ್ಲಿ ನಿಲ್ಲಿಸಿ ನಡೆದುಕೊಂಡು ಹೋಗಿರುತ್ತೇವೆ. ಆರೋಪಿತನಿಂದ ಮಧ್ಯ ಖರೀದಿ ಮಾಡಲು ಅಲ್ಲಿ 3-4 ಜನ ಸೇರಿದ್ದರು. ನಾವು ಅಲ್ಲಿ ಖರೀದಿ ಮಾಡಲು ಸೇರಿದ ಜನರನ್ನು ವಶಕ್ಕೆ ಪಡೆ್ಇಲ್ಲ. ಆ ದಿನ ಆರೋಪಿಯನ್ನು ಚಾಸಾ-1ರವರು ಹಿಡಿದಿರುತ್ತಾರೆ. ಜಪ್ತುಪಡಿಸಿಕೊಂಡ ಮುದ್ದೆಮಾಲುಗಳ ತಯ್ಯಾರಾದ ದಿನಾಂಕವನ್ನು ನಾವು ಪಂಚನಾಮೆಯಲ್ಲಿ ನಮೂದು ಮಾಡಿಲ್ಲ. ಪಂಚನಾಮೆಯನ್ನು ಚಾಸಾ-1ರವರು ನಮ್ಮ ಠಾಣೆಯ ಬರಹಗಾರರ ಮೂಲಕ ಬರೆಸಿರುತ್ತಾರೆ. ನಿಮಗೆ ಆರೋಪಿತನಿಗೆ ವಿಚಾರಿಸಿ ತನಿಖೆ ಮಾಡಲು ನಮಗೆ ಸುಮಾರು 30 ನಿಮಿಷಗಳ ಕಾಲ ಬೇಕಾಗಿತ್ತು ನಂತರ ಪಂಚನಾಮೆಯನ್ನು 30 ನಿಮಿಷಗಳ ಕಾಲದಲ್ಲಿ ಮಾಡಲಾಯಿತು. ಚಾಸಾ-1ವರು ದಾಳಿಯ ಸಮಯದಲ್ಲಿ ಅಲ್ಲಿದ್ದ ಜನರ ಹೇಳಿಕೆಗಳನ್ನು ಪಡೆದಿಲ್ಲ. ನಾವು ಆ ದಿನ ಮಂಗಲಗಿಯಿಂದ 4-30 ಗಂಟೆಗೆ ಹೊರಟು ಸಂಜೆ 5-00 ಗಂಟೆಗೆ ಠಾಣೆಗೆ ತಲುಪಿರುತ್ತೇವೆ. ಚಾಸಾ-1ರವರು ಚಾಸಾ-7ರವರಿಗೆ ಮುದ್ದೆಮಾಲುಗಳನ್ನು ನೀಡುವ ಸಮಯದಲ್ಲಿ ಮುದ್ದೆಮಾಲುಗಳನ್ನು ವಿವರಿಸಿ ಚಾಸಾ-7ರವರಿಗೆ ತೋರಿಸಿದ್ದಾರಾ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯನ್ನು ಚಾಸಾ-7ರವರಿಗೆ ಟೈಪ್ ಮಾಡಿಸಿ ಕೊಟ್ಟಿರುತ್ತೇನೆ. ನಿಮ್ಮ ಹೇಳಿಕೆಯಲ್ಲಿ ನೀವು 500 ಮೀಟರ್ ನಡೆದು ಹೋದ ವಿಚಾರ ಮತ್ತು ಚಾಸಾ-1ರವರು ಚಾಸಾ-7ರವರಿಗೆ ಮುದ್ದೆಮಾಲುಗಳನ್ನು ವಿವರಿಸಿದ ವಿಚಾರವನ್ನು ನಮೂದು ಮಾಡಿಲ್ಲ ಎಂದರೆ ಸಾಕ್ಷಿ ನಾನು ನಡೆದುಹೋದ ವಿಚಾರವನ್ನು ನಮೂದು ಮಾಡಿದ್ದೇನೆ ಆದರೆ ನಿಖರವಾಗಿ ಎಷ್ಟು ದೂರ ನಡೆದು ಹೋಗಿದ್ದೇನೆ ಎಂದು ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮುದ್ದೆಮಾಲುಗಳನ್ನು ಚಾಸಅ-1ರವರು ಚಾಸಾ-7ರವರಿಗೆ ವಿವರಿಸಿದ ವಿಚಾರವನ್ನು ನಾನು ನಮೂದು ಮಾಡಿಲ್ಲ ಎಂದು ನುಡಿಯುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ, ಯಾವುದೇ ದಾಳಿಯನ್ನು ಮಾಡಿಲ್ಲ, ಮತ್ತು ಆರೋಪಿತನಿಂದ ಯಾವುದೇ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಠಾಣೆ ಅಂಕಿ-ಸಂಖ್ಯೆಗೋಸ್ಕರ ನಿಮ್ಮ ಮೇಲಾಧಿಕಾರಿಗಳು ಮಾಡಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿತ ಯಾವುದೇ ಗುನ್ನೆ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ. ಹೇ ಕೇ.ಸರಿ ಇದೆ.

ಸಿವಿಲ್ & J.M.F.C ನ್ಯಾಯಾಧೀಶರು,
ಚಿತ್ತಾಪೂರ.